## ಹೆಬ್ಬೆಟ್ಟು

ನಾನು ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ನಡೆದ ಘಟನೆ. ಒಮ್ಮೆ ನಮ್ಮ ಕ್ಲಾಸ್ ಟೀಚರ್ ಬುಟ್ಟಿಯೊಂದನ್ನು ತೆಗೆದುಕೊಂಡು ಕ್ಲಾಸಿಗೆ ಬಂದರು. ಬುಟ್ಟಿಯನ್ನು ಟೇಬಲ್ ಮೇಲಿಟ್ಟು ಹಾಜರಿ ತೆಗೆದುಕೊಂಡರು. ಪಾಠವೆಲ್ಲಾ ಮುಗಿದ ಮೇಲೆ, 'ನಿನ್ನೆ ನಮ್ಮ ಮನೆಯಲ್ಲಿ ಹಬ್ಬದ ಪ್ರಯುಕ್ತ ಸ್ವೀಟ್ ಮಾಡಿದ್ದರು. ಅದನ್ನು ನಿಮಗೂ ಹಂಚಲು ತಂದಿದ್ದೇನೆ. ಆ ಸಿಹಿ ತಿಂಡಿ ಯಾವುದು ಎಂದು ಹೇಳಿದವರಿಗೆ ಸಿಹಿ ಪದಾರ್ಥ ಎರಡು ಹೆಚ್ಚಿಗೆ ಸಿಗುತ್ತವೆ' ಎಂದರು. ಜಿಲೇಬಿ, ಮೈಸೂರು ಪಾಕ್, ಕಡುಬು, ಲಾಡು... ಏನೆಲ್ಲಾ ಹೆಸರುಗಳು ಬಂದವು. ಅದ್ಯಾವುದೂ ಅಲ್ಲ ಎಂದರು. ಕೊನೆಯ ಬೆಂಚಿನ ವಿದ್ಯಾರ್ಥಿಯೊಬ್ಬ, 'ಒಂದು ಸುಳಿವು ಕೊಡಿ' ಎಂದ. ಆಗ ಟೀಚರ್, 'ಹೆಬ್ಬಟ್ಟು' ಎಂದರು. ಕೊನೆಯ ಬೆಂಚಿನ ಇನ್ನೊಬ್ಬ ವಿದ್ಯಾರ್ಥಿ, 'ತಿಳಿತು ಮಿಸ್, ಒಬ್ಬಟ್ಟು' ಎಂದ. ಅವನ ಕೈಗೆ ಎರಡು ಒಬ್ಬಟ್ಟು ಬಂದವು!

**ಎ.ಕೆ. ಪಟ್ಟಾಭಿ**



ಚಿತ್ರಗಳು: ಗಣೇಶ ಆಚಾರ್ಯ



## ಟಚ್‌ಸ್ಕ್ರೀನ್ ಮಹಿಮೆ

ಅದು ಶಾಲೆಗೆ ರಜೆ ಇದ್ದ ಸಮಯ. ಪುಟ್ಟ ತನ್ನ ಅಜ್ಜಿಯ ಮನೆಗೆ ಬಂದಿದ್ದ. ನಮ್ಮ ಮನೆಯ ಪಕ್ಕವೇ ಅವರ ಮನೆ. ಸಂಜೆ ಅವರಿಬ್ಬರೂ ಮಾತಾಡುತ್ತ ಕೂತಿದ್ದರು. ಅಜ್ಜಿ ಪುಟ್ಟನಿಗೆ ಏನೊ ತಿನ್ನಲು ಕೊಟ್ಟಿದ್ದಳು. ತಿಂದಾದ ಮೇಲೆ ಪುಟ್ಟ ಒಳಗೆ ಹೋಗಿ ಸೋಪು ಹಾಕಿ ಕೈ ತೊಳೆದುಕೊಂಡು ಬಂದ. ಆಗ ಅಜ್ಜಿ ಕೇಳಿದರು, 'ಅದೇನೊ, ಈಗಿನವರು ತಿನ್ನುವ ಮೊದಲು ಕೈ ತೊಳೆಯದೆ ಹೋದ್ರೂ ಏನಾದ್ರೂ ತಿಂದ ಕೂಡಲೇ ಅಷ್ಟು ಚೆನ್ನಾಗಿ ಸೋಪು ಹಚ್ಚಿ ಕೈ ತೊಳ್ಕೊತಿರಿ?' ಎಂದು. ಪುಟ್ಟ, 'ಎಲ್ಲಾ ಟಚ್‌ಸ್ಕ್ರೀನ್ ಮಹಿಮೆ ಅಜ್ಜಿ, ಸ್ವಚ್ಛವಾಗಿ ಕೈ ತೊಳೆಯದೆ ಇದ್ರೆ ಸ್ಕ್ರೀನ್ ಕೊಳೆ ಆಗುತ್ತೆ' ಎನ್ನಬೇಕೆ!

**ವಿದ್ಯಾ ಎನ್. ಪೈ**